ಸಮರ್ಥ ಉತ್ತರಾಧಿಕಾರಿಯೆಂಬಂತೆ ನಾರಾಯಣ ಅವರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಕೃತಿಗಳ ಮೂಲಕ ವಿಶಿಷ್ಟವಾದ ಛಾಪನ್ನು ನಿಚ್ಚಳವಾಗಿ ಮೂಡಿಸಿ 'ಕನ್ನಡ ಪ್ರಧಾನ' ಎನಿಸಿರುವುದು ಕನ್ನಡಿಗರಿಗೆಲ್ಲಾ ತಿಳಿದೇ ಇದೆ.

ಪಿವಿಎನ್ ಅವರ ಪ್ರಧಾನ ಒಲವು ವಿಮರ್ಶೆ ಮತ್ತು ಸಂಶೋಧನೆ. ವಚನ ಸಾಹಿತ್ಯ ಅವರ ವಿಶೇಷ ಅಧ್ಯಯನದ ಕ್ಷೇತ್ರ. ಸಹಜವಾಗಿಯೇ ಅವರ ಸಂಶೋಧನೆ ಮತ್ತು ವಿಮರ್ಶೆಯ ಬಹುಭಾಗ ವಚನ ಸಾಹಿತ್ಯಕ್ಕೆ ಸಂಬಂಧಿಸಿದ್ದಾಗಿದೆ. ಅವರ ಪಿಎಚ್. ಡಿ ಸಂಶೋಧನೆ 'ವಚನ ಸಾಹಿತ್ಯದ ಸಾಂಸ್ಕೃತಿಕ ಅಧ್ಯಯನ'ವನ್ನು ಕುರಿತಾದುದು. ವಚನ ಸಾಹಿತ್ಯದ ಮೂಲಚೂಲಗಳನ್ನು ತಮ್ಮ ಅಧ್ಯಯನದಲ್ಲವರು ಇಡಿಯಾದ ಶೋಧನೆಗೆ ಒಳಗುಮಾಡಿದ್ದಾರೆ. ಕನ್ನಡದ ವಿದ್ವಾಂಸರು ಮತ್ತು ಪ್ರೌಢ ವಿದ್ಯಾರ್ಥಿಗಳು ಅವರ ಪ್ರಮಾಣಭೂತವಾದ ಈ ಅಧ್ಯಯನವನ್ನು ಹಾಗೂ ವಚನ ಸಾಹಿತ್ಯ ಕುರಿತಂತೆ ಅವರು ಪ್ರಕಟಿಸಿರುವ ಸಂಶೋಧನಾ ಲೇಖನಗಳ ಸಂಗ್ರಹಗಳನ್ನು ನೋಡದೆ ಮುಂದೆ ಹೋಗಲು ಸಾಧ್ಯವೇ ಇಲ್ಲ ಎನ್ನುವ ಮಟ್ಟಿಗೆ ಈ ಕ್ಷೇತ್ರದಲ್ಲಿ ಅವರ ಸಾಧನೆ ಇದೆ.

ವಚನಗಳು, ಆ ಕಾಲದ ಕಾವ್ಯಗಳು, ಶಾಸನಗಳು, ಮತ್ತಿತರ ಲಭ್ಯ ಆಕರಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ, ವಚನಯುಗದ ಸಾಂಸ್ಕೃತಿಕವೆನ್ನಬಹುದಾದ ಸಂಗತಿಗಳನ್ನು ಆಗಿನ ಸಾಮಾಜಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ರಾಜಕೀಯ, ಯುದ್ಧ ಪದ್ಧತಿ, ವಿದ್ಯಾಭ್ಯಾಸ ಪದ್ಧತಿ, ಕಲೆ, ಮನರಂಜನೆ, ವೀರಶೈವ ಧರ್ಮದ ಆಚಾರ ವಿಚಾರಗಳು, ಆಗಿನ ಇನ್ನಿತರ ಕೆಲವು ಧರ್ಮಗಳು, ದೈವಗಳು – ಇಂಥ ಹಲವಾರು ಸಂಗತಿಗಳನ್ನು ವಿಸ್ತಾರವಾದ ವಿವೇಚನೆಗೆ ಒಳಗುಮಾಡುವ ಮೂಲಕ ಪಿವಿಎನ್ ಸಿದ್ಧಪಡಿಸಿಕೊಟ್ಟಿರುವ ಅತ್ಯಂತ ಪ್ರಮಾಣಭೂತವಾದ ಪರಾಮರ್ಶನಗ್ರಂಥ 'ವಚನ ಸಾಹಿತ್ಯ – ಒಂದು ಸಾಂಸ್ಕೃತಿಕ ಅಧ್ಯಯನ'.

'ವಚನ ವ್ಯಾಸಂಗ', 'ವಚನ ಪರಿಸರ', 'ವಚನ ಸಮಗ್ರ' , 'ವಚನ ನಿರ್ವಚನ', 'ವಚನ ಚಳುವಳಿ', 'ಕಾಯಕ ತತ್ವ', 'ಉರಿಲಿಂಗ ಪೆದ್ದಿ', 'ವಚನ ಸಾಹಿತ್ಯ' ಮುಂತಾದವು ಪಿವಿಎನ್‌ರ ನಿರಂತರ ಅಧ್ಯಯನದ ವಿದ್ವತ್ಪೂರ್ಣ ಕೃತಿಗಳು. 'ವಚನ ಪರಿಸರ' ಮತ್ತು 'ವಚನ ಸಮಗ್ರ' ಹೊತ್ತಗೆಗಳು ಅವುಗಳ ಹೆಸರಿಗೆ ತಕ್ಕಂತೆ ವಚನಗಳ ವಸ್ತು, ಸ್ವರೂಪ, ಭಾಷೆ, ಪ್ರಾಣಿ–ಪಕ್ಷಿ ರೂಪಕಗಳು, ಕಾಯಕ ತತ್ವ, ದಾಸೋಹ ತತ್ವ, ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಅಕ್ಕ, ಮತ್ತಿತರ ಪ್ರಮುಖ ವಚನಕಾರರು ಮತ್ತು ವಚನಕಾರ್ತಿಯರು, ವಚನಗಳಲ್ಲಿ ಕಂಡುಬರುವ ಸಾಮಾಜಿಕ ಮೌಲ್ಯಗಳು, ಇವೇ ಮೊದಲಾದ ವಚನ ವಾಙ್ಮಯಕ್ಕೆ ಸಂಬಂಧಿಸಿದ ಅನೇಕ ವಿಚಾರಗಳ ಆಳಕ್ಕಿಳಿದು ಸಾಧಾರವಾಗಿ ಎಲ್ಲವನ್ನೂ ವಿಮರ್ಶೆಯ ನಿಕಷಕ್ಕೊಡ್ಡಿ ಪ್ರಸ್ತುತಪಡಿಸುವ ರೀತಿಯಿಂದಾಗಿ ಆಪ್ಯಾಯಮಾನವಾಗುತ್ತವೆ. ಇವೆಲ್ಲವೂ ಬೇರೆ ಬೇರೆ ಕಾಲದಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ, ಬಹುಮಟ್ಟಿಗೆ ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಪ್ರಬಂಧಗಳಾದ ಕಾರಣ ಕೆಲವು ಪ್ರಬಂಧಗಳಲ್ಲಿ ಕೆಲವೊಂದು ವಿಷಯಗಳು ಪುನರಾವರ್ತನೆಯಾದಂತೆ ಅನಿಸಬಹುದು. ಆದರೆ ಪರಸ್ಪರ ವಿರುದ್ಧವೆನಿಸುವ ಸಂಗತಿಗಳಂತೂ ಎಲ್ಲಿಯೂ ಇಲ್ಲ. ವಚನಸಾಹಿತ್ಯ ಸಂಬಂಧಿಯಾದ ಅವರ ಬರಹಗಳು ವಚನ ಸಾಹಿತ್ಯದ ಒಂದು ಸಮಗ್ರವಾದ ನೋಟವನ್ನು ಅದರೆಲ್ಲ ವಿಸ್ತಾರದಲ್ಲಿ, ಆಳದಲ್ಲಿ ನಮಗೆ ನೀಡುವುದರಲ್ಲಿ ಯಶಸ್ವಿಯಾಗಿವೆ. ಒಂದು ರೀತಿಯಲ್ಲಿ ಅವರು ತಮ್ಮನ್ನು ತಾವು ವಚನ ಸಾಹಿತ್ಯದ ಅಧ್ಯಯನಕ್ಕೆ ಸಂಪೂರ್ಣವಾಗಿ ಅರ್ಪಿಸಿಕೊಂಡುಬಿಟ್ಟದ್ದರೆನ್ನಬಹುದು. ಅವರ ಕೃತಿಗಳ ವಿಶೇಷವೆಂದರೆ ಅವೆಲ್ಲವೂ ಅವರ ವಿಸ್ತಾರವಾದ ಅಧ್ಯಯನದ ಫಲಿತಗಳೇ ಹೊರತು ಯಾವುದೂ ಅವಸರದಲ್ಲಿ ರಚಿತವಾದ ಕೃತಿಯಲ್ಲ.

ಗ್ರಂಥ ಸಂಪಾದನೆ ಅವರ ಇನ್ನೊಂದು ಆಸಕ್ತಿಯ ಕ್ಷೇತ್ರವಾಗಿತ್ತು. ಅವರ ಸಂಪಾದಿತ ಗ್ರಂಥಗಳು ಅವರ ಪಾಂಡಿತ್ಯ ಮತ್ತು ಪರಿಶ್ರಮಕ್ಕೆ ನಿದರ್ಶನವೆನ್ನುವಂತಿವೆ. ಬಸವ ಪುರಾಣ ಸಂಗ್ರಹ, ಕುಮುದೇಂದು ರಾಮಾಯಣ, ಶಾಂತಿನಾಥ–ಆಂಡಯ್ಯ ಸಂಪುಟ, ಪಂಪನ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಗಳ ಸಂಕ್ಷಿಪ್ತ ಆವೃತ್ತಿ, ಕುಮಾರವ್ಯಾಸಭಾರತ ಸಂಗ್ರಹ – ಇವು ಅವರು ಸಂಪಾದಿಸಿರುವ ಪ್ರಮುಖ ಕೃತಿಗಳು. ಇವಕ್ಕೆಲ್ಲ ಕನ್ನಡ ಪಂಡಿತ ಪರಂಪರೆಗೆ ತಕ್ಕಂತೆ ಕವಿ ಕಾವ್ಯ ವಿಚಾರಾದಿಗಳನ್ನು ಕುರಿತು ವಿಸ್ತಾರವೂ